

"ಪ್ರಾಸಿಕ್ಯುಶನ್ ಪ್ರಕಾರ ಈ ಕೊಲೆಯ ಮೋಟಿವ್, ನವೀನ್ ಮತ್ತು ಅನುಪಮಾ ಅವರ ಮಧ್ಯೆ ಇದ್ದ ಸಂಬಂಧ. ಅವರಿಬ್ಬರ ಮಧ್ಯೆ ಸಂಬಂಧ ಇತ್ತು ಅಂತ ನವೀನ್ ಪತ್ನಿಗೂ ಗೊತ್ತಾಗಿದೆ, ಅದಲ್ಲದೆ ಅದೆಲ್ಲ ಮರೆತು ಹೊಸ ಜೀವನ ಪ್ರಾರಂಭಿಸೋಣ ಎಂದು ಇಬ್ಬರೂ ನಿರ್ಧರಿಸಿರುವಾಗ ಅನುಪಮಾ ಜೊತೆ ಇದ್ದ ಸಂಬಂಧ ನಗಣ್ಯವಾಗುತ್ತದೆ. ಹಾಗಾಗಿ ಅನುಪಮಾ ಅವರನ್ನು ಕೊಲೆ ಮಾಡುವ ಮೋಟಿವ್ ಅಷ್ಟು ಸ್ಟ್ರಾಂಗ್ ಅನಿಸುವುದಿಲ್ಲ."

"ಕೊಲೆಯಾದವಳು ತನ್ನನ್ನು ಬ್ಲಾಕ್‌ಮೇಲ್ ಮಾಡಲು ಯತ್ನಿಸಿದ್ದಳು ಅಂತ ಆರೋಪಿಯೇ ಒಪ್ಪಿದ್ದಾನೆ" ಪಬ್ಲಿಕ್ ಪ್ರಾಸಿಕ್ಯುಟರ್ ಕೊಂಕು ತೆಗೆದರು.

"ಅನುಪಮಾ ತನ್ನ ಬೇಡಿಕೆ ಇಟ್ಟಿರಬಹುದು. ಆದರೆ ಇವರು ಕೊಟ್ಟಿದ್ದಾರೆ, ಅಥವಾ ಕೊಡುವವರಿದ್ದರು ಅನ್ನುವುದಕ್ಕೆ ಯಾವ ಸಾಕ್ಷಾಧಾರಗಳೂ ಇಲ್ಲವಲ್ಲ. ಅಲ್ಲದೇ ಕೊಲೆಯಾದ ದಿನ ನವೀನ್, ಅವನ ಹೆಂಡತಿ ಸುನಂದಾ ಮತ್ತು ಕೊಲೆಯಾದ ಅನುಪಮಾ ಮೂವರೂ ವೈನ್ ಸೇವಿಸಿ ಊಟ ಮಾಡಿದ್ದಾರೆ. ನನ್ನ ಈವರೆಗಿನ ವೃತ್ತಿ ಜೀವನದಲ್ಲಿ ಬ್ಲಾಕ್‌ಮೇಲ್ ಮಾಡುವವರೂ, ಮಾಡಿಸಿಕೊಳ್ಳುವವರೂ ಹಾಯಾಗಿ ಕುಡಿದು ಊಟ ಮಾಡಿದರು ಎಂದು ಕೇಳಿದ್ದು ಇದೇ ಮೊದಲು."

ವ್ಯಂಗ್ಯ ಅವರು ಆಡಿದ ಪ್ರತಿ ಪದದಲ್ಲಿಯೂ ಇಣುಕುತ್ತಿತ್ತು.

"ಪೋಸ್ಟ್‌ಮಾರ್ಟಂ ರಿಪೋರ್ಟ್‌ನಲ್ಲಿ ಮೃತಳ ದೇಹದಲ್ಲಿ ಆಲ್ಕೋಹಾಲ್ ಅಂಶ ಮತ್ತು ಅರ್ಧಂಬರ್ಧ ಅರಗಿದ ಆಹಾರ ಸಿಕ್ಕಿದೆ... ಇದು ನನ್ನ ಕ್ಲೈಂಟ್ ಹೇಳಿದ ವಿವರಗಳಿಗೆ ತಾಳೆಯಾಗುತ್ತದೆ."

ಅದೊಂದು ಕ್ಲೆವರ್ ಸ್ಟ್ರಾಟಜಿ!

ಮೊದಲ ಮಾತುಗಳಲ್ಲಿಯೇ ತನ್ನ ಕ್ಲೈಂಟ್ ಸತ್ಯ ಹೇಳುತ್ತಿದ್ದಾರೆ ಎನ್ನುವುದನ್ನು ನ್ಯಾಯಾಧೀಶರಿಗೆ ಮನವರಿಕೆ ಮಾಡುವುದು ಅವರ ಉದ್ದೇಶವಾಗಿತ್ತು. ಇಂಥಾ ಕೇಸ್‌ಗಳಲ್ಲಿ ನ್ಯಾಯಾಧೀಶರು ಆರೋಪಿಗಳ ಬಗ್ಗೆ ಮೊದಲೇ ಒಂದು ಅಭಿಪ್ರಾಯ ರೂಪಿಸಿಕೊಳ್ಳುತ್ತಾರೆ. ಅದನ್ನು ತಡೆಯಬೇಕಿತ್ತು.

ಮುಂದಿನ ಸಾಕ್ಷಿಯಾಗಿ ಇನ್‌ಸ್ಪೆಕ್ಟರ್ ಭೂಷಣ್ ಬಂದು ಕಟಕಟೆಯಲ್ಲಿ ನಿಂತ. ಅವನ ಮುಖದಲ್ಲಿ ಅದೇನೋ ಆತ್ಮವಿಶ್ವಾಸ ತುಂಬಿ ತುಳುಕುತ್ತಿತ್ತು. ಲಾಯರ್ ಶ್ರೀರಂಗಾಚಾರ್ ಅವರನ್ನು ಸೋಲಿಸಿದ ಪ್ರಕರಣದ ತನಿಖಾಧಿಕಾರಿ ಎನ್ನುವ ಹೆಸರು ಶಾಶ್ವತವಾಗಿ ತನ್ನ ಬೆನ್ನಹಿಂದಿರುತ್ತದೆ ಎನ್ನುವ ವಿಶ್ವಾಸ ಅದು!

"ನಿಮ್ಮ ಇನ್ವೆಸ್ಟಿಗೇಷನ್ ಪ್ರಕಾರ, ಈ ಆರೋಪಿ ನವೀನ್, ಅನುಪಮಾಳನ್ನು ಕೊಲೆ ಮಾಡಿ, ತಕ್ಷಣ ಒಳಗಡೆ ಓಡಿಹೋಗಿ, ನಂತರ ಏನೂ ಗೊತ್ತಿಲ್ಲದವನಂತೆ ಹೊರಗಡೆ ಬಂದನು ಅಲ್ಲವಾ?"

ಹೌದು ಎಂಬಂತೆ ತಲೆ ಆಡಿಸಿದ.

"ಆರೋಪಿ ನವೀನ್ ಮನೆಯನ್ನು ಶೋಧಿಸಿದಾಗ ನಿಮಗೆ ಕೊಲೆಗೆ ಉಪಯೋಗಿಸಿದ ಆಯುಧ ಸಿಕ್ಕಿತಾ?"

"ಇಲ್ಲ ಎಲ್ಲಕಡೆ ಶೋಧಿಸಿದೆವು, ಸಿಗಲಿಲ್ಲ..."

ಕೊಲೆ ಮಾಡಿದ ಆಯುಧ ಸಿಗದಿದ್ದರೆ ಅದನ್ನು ಹುಡುಕಿ, ನ್ಯಾಯಾಲಯದ ಮುಂದೆ ಇಡಬೇಕು ಎಂದು ಕೇಳುತ್ತಾರೆ. ಅಲ್ಲಿಯವರೆಗೂ ನವೀನ್ ಕಸ್ಟಡಿಯಲ್ಲಿ ಇರುತ್ತಾನೆ... ಆ ಸಮಯದಲ್ಲಿ ಕಳಚಿಕೊಂಡಿರುವ ಕೊಂಡಿಗಳನ್ನು ಸೇರಿಸಬಹುದು ಎಂದು ಭೂಷಣ್ ಎಂದುಕೊಂಡ. ಆದರೆ ಶ್ರೀರಂಗಾಚಾರ್, "ಸರಿ ಹೊರಡಿ ಮತ್ತೆ ಬೇಕಾದರೆ ಕರೆಸುವೆ" ಎಂದಾಗ ಆಶ್ಚರ್ಯವಾಯಿತು.

"ಮೈಲಾರ್ಡ, ನವೀನ್ ಮನೆಯನ್ನು ಶೋಧಿಸಿದಾಗ ಸಿಕ್ಕ ವಸ್ತುಗಳ ಲಿಸ್ಟ್ ನಿಮ್ಮ ಮುಂದಿದೆ.